ಓ. ಎಸ್. ನಂ.  70-2021 ಡಿಡಬ್ಲ್ಯೂ- 2.

ದಿನಾಂಕಃ 11-02-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲು  ಃ ವಾದಿ ಪರವಾಗಿ ಶ್ರೀ. ವಿ.ವಾಯ್. ಎಲ್.  ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಷ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯು ನನಗೆ ಸಂಬಂಧಿಕರಾಗಿರುವುದಿಲ್ಲ. ದಾವಾಸ್ತಿಗೆ ಪ್ರತ್ಯೆಕವಾಗಿ ಹೋಗಲು ಮೆಟ್ಟುಲುಗಳು ಇವೆ ಎಂದರೆ ಸರಿ. ದಾವಾಸ್ತಿಯಲ್ಲಿ ವಾದಿಗೆ ಸಂಬಂಧಿಸಿದ ವಸ್ತುಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ವಾದಿಯೇ ದಾವಾಸ್ತಿಯ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಯು ವಾದಿಯ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧಿಸಿದ ದಾಖಲಾತಿಗಳಲ್ಲಿ ಪ್ರತಿವಾದಿಯೇ ಮಾಲೀಕರಾಗಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ. ನನಗೆ ಈಗ ತೋರಿಸಿದ ನಿಡಿ. 1 ಮತ್ತು 2 ರಲ್ಲಿ ಪ್ರತಿವಾದಿಯು ಮಾಲೀಕರಾಗಿರುತ್ತಾರೆಂದು ನಮೂದಿಸಿರುವುದಿಲ್ಲ. ದಾವಾಸ್ತಿಗೆ ಸಂಬಂಧಿಸಿದ ವಿದ್ಯುತ ಪಾವತಿ ದರಗಳು ವಾದಿಯ ತಂದೆಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ದಾವಾಸ್ತಿಗೆ ಸಂಬಂಧಿಸಿದ ನನಗೆ ಯಾವುದೇ ಮಾಹಿತಿ ಇಲ್ಲ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಹಾಗೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಇಂದಿಗೂ ದಾವಾಸ್ತಿ ವಾದಿಯ ಕಬ್ಜೆಯಲ್ಲಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ